# ಕಣದ ಹೊರಗಿನ ಕುಸ್ತಿ

ಭಾರತದ ಹೆಮ್ಮೆಯ ಕುಸ್ತಿಪಟು, ಎರಡು ಒಲಿಂಪಿಕ್ಸ್ ಪದಕ ವಿಜೇತ, ಸುಶೀಲ್ ಕುಮಾರ್ ಸುತ್ತ ವಿವಾದದ ಹುತ್ತ ಬೆಳೆಯುತ್ತಿದೆ. ಕುಸ್ತಿ ಕಣದಲ್ಲಿ ತನ್ನ ಎದುರಾಳಿಗಳ ವಿರುದ್ಧ ಹೋರಾಡುತ್ತಲೇ, ಕುಸ್ತಿ ಕಣದ ಹೊರಗೆ ಎದುರಾಳಿಗಳ ಮೇಲೆ ಹಲ್ಲೆ ನಡೆಸುವ ಕುತಂತ್ರಗಳನ್ನು ಸುಶೀಲ್ ಕುಮಾರ್ ನಡೆಸುತ್ತಿದ್ದಾರೆ ಎನ್ನುವುದು ಅವರ ಮೇಲಿರುವ ದೊಡ್ಡ ಆರೋಪ. ಈ ಆರೋಪಗಳಿಗೆ ದಿನ ಕಳೆದಂತೆ ಹೆಚ್ಚು ಬಲ ಬರುತ್ತಿರುವುದು ನೋಡಿದರೆ, ಸುಶೀಲ್ ಮುಂದಿನ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವುದೇ ಅನುಮಾನ ಎಂಬಂತಾಗಿದೆ.

ಡಿ.30ರಂದು ದೆಹಲಿಯಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಟ್ರಯಲ್ಸ್ ಪಂದ್ಯದ ವೇಳೆ ನಡೆದ ಮಾರಾಮಾರಿ ಭಾರತೀಯ ಕುಸ್ತಿ ಇತಿಹಾಸಕ್ಕೆ ಮಸಿ ಬಳಿದದ್ದು ನಿಜ. ಏಪ್ರಿಲ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ 74 ಕೆ.ಜಿ ದೇಹತೂಕದ ವಿಭಾಗದಲ್ಲಿ ಭಾರತವನ್ನು ಯಾರು ಪ್ರತಿನಿಧಿಸಬೇಕು ಎನ್ನುವುದನ್ನು ನಿರ್ಧರಿಸಲು ಆಯ್ಕೆ ಟ್ರಯಲ್ಸ್ ನಡೆದಿತ್ತು. ಸೆಮಿಫೈನಲ್‌ನಲ್ಲಿ ಸುಶೀಲ್ ಕುಮಾರ್ ಸೋಲಂಕಿಯನ್ನು ಎದುರಿಸಿದಾತ ಪ್ರವೀಣ್ ರಾಣಾ. ಸ್ಪರ್ಧೆ ಆರಂಭಕ್ಕೆ ಮುಂಚೆಯೇ ಕಣದ ಸುತ್ತ ಉದ್ರಿಕ್ತ ಸ್ಥಿತಿಇತ್ತು. ಕುಸ್ತಿ ಶುರುವಾದಂತೆಯೇ ಇಬ್ಬರ ಬೆಂಬಲಿಗರ ಮಧ್ಯೆ ವಾಗ್ವಾದಗಳೂ ನಡೆದವು. ಒಂದು ಹಂತದಲ್ಲಿ ಸುಶೀಲ್ ಕುಮಾರ್ ರೆಫರೀ ಬಳಿ ಬಂದು ಪ್ರವೀಣ್ ತಮ್ಮ ಭುಜ ಕಚ್ಚಿ, ಕೆನ್ನೆಗೆ ಹೊಡೆದಿದ್ದಾನೆ ಎಂದು ದೂರಿದ್ದೂ ಆಯಿತು. ಪಂದ್ಯದಲ್ಲಿ ಕೊನೆಗೆ ಸುಶೀಲ್ 7–3ರಲ್ಲಿ ಗೆದ್ದರು. ಆದರೆ ಮರುಕ್ಷಣವೇ ಕಣದ ಹೊರ ಆವರಣದಲ್ಲಿ 20–25 ಜನ ಪ್ರವೀಣ್ ಮೇಲೆ ನುಗ್ಗಿ ಬಂದರು. ತಡೆಯಲು ಹೋದ ಪ್ರವೀಣ್‌ನ ಅಣ್ಣ ನವೀನ್ ವಿರುದ್ಧ ಮುಗಿಬಿದ್ದ ಗುಂಪು ಹಿಗ್ಗಾಮುಗ್ಗಾ ಥಳಿಸಿತು. ಪೊಲೀಸರು ಬರುವ ವೇಳೆಗೆ ನವೀನ್ ತಲೆಯಿಂದ ರಕ್ತ ಸೋರುತ್ತಿತ್ತು.

ನವೀನ್ ರಾಣಾ ಕೊಟ್ಟಿರುವ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದರೆ, ಸುಶೀಲ್‌ಕುಮಾರ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಾಗದು ಎಂದು ಈಗ ಭಾರತೀಯ ಕುಸ್ತಿ ಒಕ್ಕೂಟ (ಡಬ್ಲ್ಯುಎಫ್‌ಐ) ಸ್ಪಷ್ಟಪಡಿಸಿದೆ. ಸುಶೀಲ್ ಕಾಮನ್‌ವೆಲ್ತ್‌ನಲ್ಲಿ ಭಾಗವಹಿಸದಂತೆ ತಡೆಯಲೆಂದೇ ವಿರೋಧಿಗಳು ಸಂಚು ಹೂಡಿದ್ದಾರೆ ಎನ್ನುವುದು ಅಭಿಮಾನಿಗಳ ವಾದ.

ವಿವಾದಗಳು ಸುಶೀಲ್‌ರನ್ನು ಬೆನ್ನು ಹತ್ತಿದ್ದು ಇದೇ ಮೊದಲಲ್ಲ. 2016ರಲ್ಲಿ ರಿಯೊ ಒಲಿಂಪಿಕ್ಸ್‌ಗೆ ಭಾರತದ ಆಯ್ಕೆಯೂ ವಿವಾದವಾಗಿತ್ತು. ಆಗ ಮೂರು ವರ್ಷ ಸುಶೀಲ್ ಕಣದಿಂದ ಹೊರಗಿದ್ದರು. ನರಸಿಂಗ ಯಾದವ್ 2015ರಲ್ಲಿ 74 ಕೆ.ಜಿ ವಿಭಾಗದಲ್ಲಿ ವಿಶ್ವಚಾಂಪಿಯನ್ ಆಗಿದ್ದವರು. ನಿಯಮದ ಪ್ರಕಾರ ಅವರೇ ರಿಯೋ ಒಲಿಂಪಿಕ್ಸ್‌ಗೆ ಆಯ್ಕೆ ಆಗಿದ್ದರು. ಸುಶೀಲ್ ತಕರಾರು ಹೂಡಿದರು. 'ನಾನು 2008ರ ಬೀಜಿಂಗ್ ಒಲಿಂಪಿಕ್ಸ್ ನಲ್ಲಿ ಕಂಚಿನ ಪದಕ, 2012ರ ಒಲಿಂಪಿಕ್ಸ್‌ನಲ್ಲಿ ಬೆಳ್ಳಿಯ ಪದಕ ಗೆದ್ದಿದ್ದೇನೆ. ಗಾಯದಿಂದಾಗಿ 2015ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡಿಲ್ಲ. ಈಗ ನನ್ನ ಮತ್ತು ನರಸಿಂಗ ಯಾದವ್ ಮಧ್ಯೆ ಸ್ಪರ್ಧೆ ಏರ್ಪಡಿಸಿ. ಅದರಲ್ಲಿ ಯಾರು ಗೆಲ್ಲುತ್ತಾರೋ ಅವರು ರಿಯೊ ಒಲಿಂಪಿಕ್ಸ್‌ಗೆ ಹೋಗಲಿ' ಎನ್ನುವುದು ಸುಶೀಲ್ ವಾದವಾಗಿತ್ತು. ಸುಶೀಲ್ ಕೋರ್ಟಿಗೂ ಹೋದರು. 'ಕುಸ್ತಿ ಫೆಡರೇಷನ್‌ನವರೇ ತೀರ್ಮಾನಿಸಲಿ' ಎಂದಿತು ಹೈಕೋರ್ಟ್. ಫೆಡರೇಷನ್‌ನವರು ಯಾದವ್‌ರನ್ನೇ ರಿಯೊ ಒಲಿಂಪಿಕ್ಸ್‌ಗೆ ಆಯ್ಕೆ ಮಾಡಿದರು. ಆದರೆ ಡೋಪಿಂಗ್ ಟೆಸ್ಟ್‌ನಲ್ಲಿ ಸಿಕ್ಕಿಬಿದ್ದ ನರಸಿಂಗ ಯಾದವ್ ಒಲಿಂಪಿಕ್ಸ್‌ಗೆ ಹೋಗಲಾಗಲಿಲ್ಲ. ಈ ಡೋಪಿಂಗ್ ಟೆಸ್ಟ್‌ನಲ್ಲಿ ಯಾದವ್ ಸಿಕ್ಕಿಬೀಳುವಂತೆ ಸುಶೀಲ್ ಸಂಚು ಹೂಡಿದ್ದರು ಎಂಬ ಆರೋಪವೂ ಕೇಳಿಬಂತು.

2017ರ ಡಿಸೆಂಬರ್ ಕೊನೆಯಲ್ಲಿ ಇಂದೋರ್‌ನಲ್ಲಿ ನ್ಯಾಷನಲ್ ಚಾಂಪಿಯನ್‌ಷಿಪ್ ನಡೆಯಿತು. ಸುಶೀಲ್ ಅವರೇ ರಾಷ್ಟ್ರೀಯ ಚಾಂಪಿಯನ್ ಆದರು. ಆದರೆ ಕ್ವಾರ್ಟರ್ ಫೈನಲ್, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳಲ್ಲಿ ಅವರ ವಿರುದ್ಧ ಸೆಣಸಲು ಎದುರಾಳಿಗಳು ಯಾರೂ ಒಪ್ಪದೇ ವಾಕ್‌ಓವರ್ ನೀಡಿದ್ದರು! 'ಅವರೆಲ್ಲ ನನ್ನ ಜೂನಿಯರ್ಸ್. ಅವರಿಗೆ ನನ್ನ ಬಗ್ಗೆ ಪ್ರೀತಿ, ಗೌರವವಿದೆ, ಅದಕ್ಕೇ ಸ್ಪರ್ಧಿಸಲು ಒಪ್ಪಲಿಲ್ಲ' ಎನ್ನುವುದು ಸುಶೀಲ್ ಮಾತು. 'ಎದುರಾಳಿಗಳಿಗೆ ಬೆಂಬಲಿಗರ ಮೂಲಕ ಬೆದರಿಕೆ ಒಡ್ಡುವುದು ಸುಶೀಲ್ ತಂತ್ರ. ಹಾಗಾಗಿ ಅವರ ವಿರುದ್ಧ ಯಾರೂ ಸ್ಪರ್ಧಿಸಿಲ್ಲ' ಎನ್ನುವುದು ವಿರೋಧಿಬಣದ ದೂರು!

ಇದನ್ನು ಬರೆಯುವ ಹೊತ್ತಿಗೆ ಪ್ರೊ ಕುಸ್ತಿ ಟ್ರಯಲ್‌ನಲ್ಲಿ ಮೊಣಕಾಲಿಗೆ ಗಾಯವಾಗಿ ಸುಶೀಲ್ ಕುಮಾರ್ ಎರಡು ದಿನಗಳ ವಿಶ್ರಾಂತಿಗೆ ತೆರಳಿದ್ದಾರೆ. ಪ್ರೊ ಕುಸ್ತಿಯಲ್ಲಿ ಅವರ ಅನುಪಸ್ಥಿತಿಯಲ್ಲಿ ದೆಹಲಿ ಪರ ಪ್ರವೀಣ್ ಥಾಪಾ ಕಣಕ್ಕೆ ಇಳಿದಿದ್ದಾರೆ. ದೆಹಲಿ ಸುಲ್ತಾನ್ಸ್ ತಂಡ ಪ್ರೊ ಕುಸ್ತಿಗೆ ಸುಶೀಲ್‌ರನ್ನು 55 ಲಕ್ಷ ರೂಪಾಯಿ ಕೊಟ್ಟು ಖರೀದಿಸಿದೆ. ಕುಸ್ತಿಯ ಇತಿಹಾಸದಲ್ಲೇ ಇಷ್ಟು ಮೊತ್ತಕ್ಕೆ ಇನ್ನೊಬ್ಬ ಆಟಗಾರ ಹರಾಜಾಗಿಲ್ಲ. ಆದರೆ ಅಭಿಮಾನಿಗಳ ಪುಂಡಾಟಿಕೆಯಿಂದಾಗಿ ತನ್ನ ಮಾನ ಕುಸ್ತಿಯ ಕಣದ ಹೊರಗೆ ಹರಾಜಾಗುತ್ತಿದೆ ಎನ್ನುವುದು ಸುಶೀಲ್ ಅರಿವಿಗೆ ಇನ್ನೂ ಬಂದಂತಿಲ್ಲ! ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65